ಕಂಗೆಡದ ಯಶೋದೆ, ತಾಯಿಯನ್ನು ಕಳಕೊಂಡಾಗ ಮಾತ್ರ ಹಸುಗೂಸಿನಂತೆ ಅತ್ತಿದ್ದಳು. ತಾಯಿಯ ಸಾವಿನ ಶೋಕದಲ್ಲಿ ಮೊದಲೇ ಅರ್ಧವಾಗಿದ್ದ ಯಶೋದೆಯ ಆರೋಗ್ಯ ಎರಡೆರಡು ಬಾರಿ ಮೈಯಿಳಿದು ಹೋದಾಗ ಹದಗೆಟ್ಟಿತ್ತು. ಅದ್ಯಾವ ವಿಷಗಳಿಗೆಯೋ ನಿಂಗನ ಮನಸ್ಸು ಮತ್ತೊಬ್ಬಳತ್ತ ಹರಿಯಿತು. ಅನಾಥ ಎಳೆ ಚಿಗರೆಯಂತಹ ಹುಡುಗಿ ಪಾರ್ವತಿಯ ಸಾಂಗತ್ಯ ತನ್ನದೇ ಆಳ್ವಿಕೆ ನಡೆಸುವ ಪ್ರೌಢ ಯಶೋದೆಗಿಂತ ಹೆಚ್ಚು ಆಕರ್ಷಕವಾಗಿ ಕಂಡದ್ದರಲ್ಲಿ ಏನಾಶ್ಚರ್ಯ? ಓಣಿಯವರೆಲ್ಲ 'ಮನೆಯಲ್ಲಿ ಬೆಳಗುತ್ತಿದ್ದ ಹಿರಿಜೀವ ಆರಿ ಹೋತು. ಅದಕ್ಕs ಬೇಲಿ ದಾಟಿ ನಿಂತ ಬಳ್ಳಿ ಬೆಳಕೋತನs ಹೊಂಟದ' ಎಂದು ಲೊಚಗುಟ್ಟಿದ್ದು ಸುಳ್ಳಲ್ಲ.

ನೆನಪುಗಳ ಮಳೆಯಲ್ಲಿ ತೋಯುತ್ತ ನಿಂತವಳಿಗೆ ಗಂಟೆ ಎಂಟಾಗಿದ್ದೇ ಗೊತ್ತಾಗಿರಲಿಲ್ಲ ನನಗೆ. ಇಂದು ಶ್ರಾವಣ ಶುಕ್ರವಾರ, ಬೆಳಿಗ್ಗೆ ಹತ್ತಕ್ಕೆ ಪ್ರ್ಯಾಕ್ಟಿಕಲ್ಸ್ ಬೇರೆ. ಆದರೂ ಪೂಜೆ, ನೈವೇದ್ಯ ಮಾಡದೆ ಹೋಗುವುದೆಂದರೆ ಮನಸ್ಸಿಗೆ ಏನೋ ಒಂಥರಾ ಕಿರಿಕಿರಿ. ಬೇಗ ಬೇಗ ತಲೆ ಸ್ನಾನ ಮಾಡಿಕೊಂಡು ಕರಿಗಡಬಿನ ವಿಚಾರ ಬಿಟ್ಟು ಒಂದಿಷ್ಟು ಹಯಗ್ರೀವಕ್ಕೆ ಕಡಲೆಬೇಳೆ ಬೇಯಿಸಿ ಪಾಯಸಕ್ಕೆಂದು ಹಾಲಿನ ಪ್ರತೀಕ್ಷೆ ಮಾಡುವಾಗ ಹೊರಗೆ ವರಾಂಡಾದಲ್ಲಿ ಏನೋ ಕುಸು ಕುಸು ಅಳುವ ಸದ್ದು; ಗಾಬರಿಯಾಗಿ ಹೊರಬಂದರೆ ಸೆರಗಿಗೆ ಮೂಗೊರೆಸುತ್ತಾ ತಲೆಗೆ ಕೈ ಹಚ್ಚಿ ಕುಳಿತಿದ್ದಾಳೆ ಯಶೋದೆ! ಏನs ಏನಾತು? ಎಂದು ಪರಿ ಪರಿಯಾಗಿ ಕೇಳಿದರೂ ಹಾಂ ಹೂಂ ಇಲ್ಲದೆ ಕುಳಿತವಳ ಕಡೆಗೊಮ್ಮೆ ನಾ ಸಿಟ್ಟಾದಾಗ ಬಿಕ್ಕುಗಳ ಮಧ್ಯ ಉಸುರಿದ್ದಳು: "ಪಾರವ್ವ ಬಸರಾಗ್ಯಾಳ್ರಿ!"

ಅವಳ ನೋವು ನನಗಿಂತ ಯಾರಿಗೆ ಚೆನ್ನಾಗಿ ಅರ್ಥವಾಗಬಹುದಿತ್ತು? ಆದರೂ ಕುಳಿತು ನಾಲ್ಕು ಸಮಾಧಾನದ ಮಾತೂ ಹೇಳಲಾಗದ ವ್ಯವಧಾನವೇ ಇಲ್ಲದ ದಿನಚರಿ! ಬಹಳ ಬೇಜಾರೆನಿಸಿತ್ತು; ಅವಳ ಕಣ್ಣೊರೆಸಿ ದೇವರ ಮುಂದಿನ ಕುಂಕುಮ ಹಚ್ಚಿ ನೈವೇದ್ಯದ ಹಣ್ಣು ಕೈಗಿತ್ತು ತಲೆ ಸವರಿದ್ದೆ. "ನೋಡು, ಶುಕ್ರವಾರ ಹೆಣ್ಣುಮಗಳು ನೀ ಕಣ್ಣೀರು ಹಾಕಬಾರ್ದು. ಆ ದೇವರು ಕಣ್ಣ ಬಿಟ್ಟ ಅಂದರ ನಿನ್ನ ಮನ್ಯಾಗೂ ತೊಟ್ಟಿಲು ತೂಗತದ ಕಾಳಜಿ ಮಾಡಬ್ಯಾಡ" ಎಂದಾಗ ಕಣ್ಣೊರೆಸಿಕೊಂಡು ನಕ್ಕಿದ್ದಳು. "ಅಕ್ಕಾರ ನಿಮ್ಮ ಬಾಯಾಗ ಸಕ್ಕರಿ ತುಪ್ಪ ಬೀಳಲಿ. ಆ ಶಿವನ ಆಶೀರ್ವಾದದಿಂದ ನಿಮ್ಮ ಹರಕಿ ಖರೆ ಆಗಲಿ. ನಿಮ್ಮ ಜೋಡಿ ಮಾತಾಡಿದೆ ಅಂದ್ರ ಹೊಟ್ಟ್ಯಾಗಿನ ಮಾತೆಲ್ಲಾ ಹೊರಗ ಬಂದು ನಾ ನಿರುಮ್ಮಳ ಆಗ್ತೇನು. ಅದೇನೋ ಜಾದೂ ಐತ್ರಿ ನಿಮ್ಮ ಮಾತ್ನ್ಯಾಗ" ಎಂದು ಬುಟ್ಟಿಯೆತ್ತಿಕೊಂಡು ಹೇಳಿದ್ದಳು, "ಅಕ್ಕಾರ ನನ್ನ ಪೋಸ್ಟಾಫೀಸಿನ ರೊಕ್ಕಾ ಎಷ್ಟಾಗೈತಿ ನೋಡಿ ಹೇಳ್ರಿ, ತೆಗೆಸಿ ಔಷಧ ಗುಳಿಗಿ ಕೊಡಸ್ತೇನು ನಿಂಗಪ್ಪಗ," ಸುಮ್ಮನೆ ಹೂಂಗುಟ್ಟಿದ್ದೆ ನಾನು. ಅವಳು ಹೊರಟು ಹೋದಾಗ ಅರಿವಾಗಿತ್ತು ಯಶೋದಾ ಈ ತರಹ ಬಿಕ್ಕಿ ಬಿಕ್ಕಿ ಅತ್ತಿದ್ದು ಇದೇ ಮೊದಲು ಎಂದು.

ಆಶ್ಚರ್ಯವೆಂದರೆ ಮೂವತ್ತೈದು ಮೀರಿದ್ದ ನನಗೂ ನಲ್ವತ್ತರ ರವಿಗೂ ಮಕ್ಕಳೇಕಿಲ್ಲ ಎಂದು ಅವಳು ಎಂದೂ ವಿಚಾರಿಸದೇ ಇದ್ದಿದ್ದು. ಆದರೆ ಯಶೋದೆ ಮುಗ್ಧಳಾದರೂ ಕೆದಕಿ ಕೇಳಬಾರದ ವಿಷಯಗಳೇನೆಂಬುದನ್ನು ಬಲ್ಲ ಸುಸಂಸ್ಕೃತಳು. ಇನ್ನು, ಬೇಕಾಗಿ ಸುತ್ತಿ ಬಳಸಿ ಮಾತಾಡಿ ಕೇಳಿ ತಿಳಿಯುವ ಕುಹಕಿಯಂತೂ ಅಲ್ಲವೇ ಅಲ್ಲ. ಸುತ್ತಲಿನ ಕೆಲವು ಸುಶಿಕ್ಷಿತ ಮಂದಿ ಮತ್ತು ಬಂಧು ಬಾಂಧವರೆನಿಸಿಕೊಂಡ ಜನ ಯಾವುದೇ ಮಾತು ಶುರು ಮಾಡಿದರೂ ಕೊನೆಗೆ ನನ್ನ ಬಂಜೆತನಕ್ಕೇ ತಂದು ಹಚ್ಚುವಾಗ ಒಳಗೊಳಗೇ ನೋಯುತ್ತೇನೆ. 'ಅಯ್ಯ ಇಷ್ಟು ದೊಡ್ಡ ಬಂಗ್ಲೆ, ಕಾರು, ಜಮೀನು ಆಸ್ತಿ ಪಾಸ್ತಿಗೆ ವಾರಸದಾರ ಬ್ಯಾಡೇನs ಸುಮಿ' ಎಂದು ರಾಗ ಎಳೆವಾಗ ನೋವಿನಲ್ಲೂ